

# ಗಾಂಧಿ 150

ಗಾಂಧೀಜಿ ಈ ಜಗಕ್ಕೆ ಸಿಕ್ಕ ಬೆಳಕು. ಬರೀ ಇರುವುದನ್ನು ಕಾಣಿಸುವ ಬೆಳಕಲ್ಲ; ಗಾಜಿನ ದರ್ಪಣದೊಳಗೆ ಹಾದು ಹಲವು ಬಣ್ಣಗಳ ಕಾಮನಬಿಲ್ಲು ಸೃಷ್ಟಿಸಬಲ್ಲ ಬೆಳಕು. ನಾವೆಲ್ಲ ದರ್ಪಣ ಹಿಡಿದು ನಿಂತವರು. ಒಬ್ಬೊಬ್ಬರ ಕೈಯಲ್ಲಿನ ದರ್ಪಣಗಳಲ್ಲಿಯೂ ಒಂದೊಂದು ಬಣ್ಣ. ದರ್ಪಣ ಬಾಗಿದಷ್ಟೂ ಹೊಸ ನೋಟ – ಭಿನ್ನ ಭಿನ್ನ ಬೆಳಕಿನಾಟ. ಬಿಸಿಲಾಗುವ ಬಿರುಸೂ, ಬೆಳದಿಂಗಳಾಗುವ ಸೊಗಸೂ ಗಾಂಧಿ ವ್ಯಕ್ತಿತ್ವಕ್ಕಿದೆ. ಈ ಎರಡು ಆಯಾಮಗಳ ಮೂಲದಲ್ಲಿ ತಾಯಿಯ ನಿಷ್ಠುರ ಮಮಕಾರವಿದೆ. ಹಾಗಾಗಿಯೇ ಸವೆದಷ್ಟೂ ಪರಿಮಳ ಚೆಲ್ಲುವ ಚಂದನದಂತೆ ದಿನದಿಂದ ದಿನಕ್ಕೆ ಗಾಂಧಿ ಹೆಚ್ಚು ಪ್ರಸ್ತುತ. ಸತ್ಯ, ಅಹಿಂಸೆ, ಸತ್ಯಾಗ್ರಹದಂಥ ಜನಪ್ರಿಯ ತತ್ವಗಳಾಚೆಯೂ ಇಂದಿನ ತಲೆಮಾರು ಮಹಾತ್ಮನನ್ನು ಹೇಗೆ ಪರಿಭಾವಿಸಿಕೊಂಡಿದೆ? ಗಾಂಧಿ ನಮಗಿಂದು ಏಕೆ ಮುಖ್ಯ? ಈ ಪ್ರಶ್ನೆಗಳ ಹಿನ್ನೆಲೆಯಲ್ಲಿ ವಿವಿಧ ಕ್ಷೇತ್ರಗಳ ವ್ಯಕ್ತಿಗಳು ನೀಡಿರುವ ಪ್ರತಿಕ್ರಿಯೆಗಳು ಇಲ್ಲಿವೆ. ಗಾಂಧೀಜಿ 150ನೇ ಹುಟ್ಟುಹಬ್ಬದ ಸಂದರ್ಭದಲ್ಲಿ, ಗಾಂಧಿಯೆಂಬ ಬೆಳಕಿಗೆ ಮೈಯೊಡ್ಡಿರುವವರ ಈ ಟಿಪ್ಪಣಿಗಳು ಆ ಬೆಳಕಿನೊಳಗಿನ ಹಲವು ಬಣ್ಣಗಳನ್ನು ದರ್ಶಿಸುವಂತಿವೆ.

**ನಿರೂಪಣೆ: ಪದ್ಮನಾಭ ಭಟ್**



ವಿನ್ಯಾಸ: ದಿಲ್